# ‘ನನಗೆ ಸಿನಿಮಾ ಬಿಟ್ಟು ಬೇರೇನೂ ಬರಲ್ಲ..

ನಿರ್ದೇಶಕ ಯೋಗರಾಜ್ ಭಟ್ ಅವರ ಹೊಸ ಸಿನಿಮಾ ‘ಪಂಚತಂತ್ರ’ ಅವರ ಅಭಿಮಾನಿಗಳಲ್ಲಿ ನಿರೀಕ್ಷೆಗಳನ್ನು ಹುಟ್ಟು ಹಾಕಿದೆ. ಪಂಚತಂತ್ರ ವಿಭಿನ್ನ ಚಿತ್ರ ಎನ್ನುತ್ತಾರೆ ಯೋಗರಾಜ್ ಭಟ್.

**ಮಾತುಕತೆ: ಬಿ.ಎಂ. ಹನೀಫ್**
ಚಿತ್ರ: ಆನಂದ್ ಬಕ್ಷಿ



★ ಏಕೆ ನಿಮ್ಮ ಸಿನಿಮಾಗಳು ಇತ್ತೀಚೆಗೆ ಇಷ್ಟೊಂದು ನಿಧಾನವಾಗಿ ಬರುತ್ತಿವೆ?

ವರ್ಷಕ್ಕೆ ಎರಡು ಸಿನಿಮಾ ಮಾಡಬೇಕು ಅಂದ್ಕೋತೀವಿ, ಆಗಲ್ಲ. ಹತ್ತು ತಿಂಗಳಿಗೆ ಒಂದು. ಹೀರೋಗಳು ಅಪ್ಪಂದಿರ ಹಾಗೆ. ವರ್ಷಕ್ಕೆ 2– 3 ಸಿನಿಮಾ ಮಾಡಬಹುದು. ಆದರೆ ನಾವು ಟೆಕ್ನಿಷಿಯನ್ಸ್ ಹಾಗಲ್ಲ. ಅಮ್ಮಂದಿರ ಹಾಗೆ. ಹೆರಿಗೆ ನೋವು ನಮಗೆ. ನಮಗೆ ಡಿಪಾರ್ಟ್‌ಮೆಂಟ್‌ಗಳು ಜಾಸ್ತಿ. ಕಥೆ, ಚಿತ್ರಕಥೆ ಬರೆದು, ತಂತ್ರಜ್ಞರು ಸಹಿ ಮಾಡಿ, ಪ್ರಿ ಪ್ರೊಡಕ್ಷನ್, ಪೋಸ್ಟ್ ಪ್ರೊಡಕ್ಷನ್ ಎಲ್ಲದಕ್ಕೂ ನಾವು ಕಾಯಲೇಬೇಕು. ಹಾಗಾಗಿ ಒಂದು ವರ್ಷ ಬೇಕೇ ಬೇಕು. ಹೀರೋಗಳಿಗೆ ಆ ನೋವು ಇರಲ್ಲ. ವರ್ಷಕ್ಕೆ ಮೂರು, ಮೂರು ಡೇಟ್ ಕೊಡಬಹುದು. ಅದು ಸಹಜ.

★ ಕೆಲವು ನಿರ್ದೇಶಕರ ಹೊಸ ಸಿನಿಮಾಗಳ ಬಗ್ಗೆ ಜನ ಕುತೂಹಲ ಉಳಿಸಿಕೊಂಡು ಕಾಯುತ್ತಾರೆ. ಅಂತಹ ಕೆಲವೇ ನಿರ್ದೇಶಕರಲ್ಲಿ ನೀವೂ ಒಬ್ಬರು. ಡಿಮ್ಯಾಂಡ್ ಇರುವಾಗ ಹೆಚ್ಚು ಸಿನಿಮಾಗಳನ್ನು ಮಾಡಬೇಕು ಅಂತ ನಿಮಗೆ ಅನ್ನಿಸಿಲ್ವಾ?

ಖಂಡಿತಾ ಇಲ್ಲ, ಇದು ನೈಸರ್ಗಿಕ ಪ್ರಕ್ರಿಯೆ. ಬರಹಗಾರನಿಗೂ ಇದು ಅನ್ವಯಿಸುತ್ತದೆ. ಒಂದು ಕಥೆ, ಕಾದಂಬರಿ ಬರೆಯೋದಕ್ಕೆ ಅವನೂ ಅವಸರ ಮಾಡುವಂತಿಲ್ಲ. ವರ್ಷಕ್ಕೆ ಬೇಕಾದಷ್ಟು ಸಿನಿಮಾಗಳನ್ನು ಹೀರೋಗಳು, ನಿರ್ಮಾಪಕರು ಮಾಡಬಹುದು. ಟೆಕ್ನಿಷಿಯನ್ಸ್ ಯಾವತ್ತೂ ಮೂಡಿಗಳು. ಕಥೆ ಹುಟ್ಟಿ ಅದೊಂದು ರೂಪ ಪಡೆಯೋದಕ್ಕೆ ಒಂದೆರಡು ವರ್ಷ ತಗೊಳುತ್ತೆ. ಕೆಲವೊಮ್ಮೆ ಮೂರು ವರ್ಷವೂ ಆಗಬಹುದು. ಈ ಅವಸರದ ನಿಯಮಗಳು ಟೆಕ್ನಿಷಿಯನ್ಸ್‌ಗೆ ಅನ್ವಯ ಆಗುವುದಿಲ್ಲ.

★ ನಿಮ್ಮ ನಿರ್ದೇಶನದ ಈವರೆಗಿನ ಸಿನಿಮಾಗಳಲ್ಲಿ ಒಂದು ಏಕಸೂತ್ರ ಕಾಣುತ್ತಿತ್ತು. ಈಗ ಪಂಚತಂತ್ರ ಅದಕ್ಕಿಂತ ಭಿನ್ನ ಎಂದಿದ್ದೀರಿ, ಹೇಗೆ?

ಪಂಚತಂತ್ರ ವಸ್ತು ನನ್ನದಲ್ಲ, ಪಂಚತಂತ್ರ ಮತ್ತು ಈಸೋಪನ ಕಥೆಗಳು. ಮಾಸ್ತಿ ಮತ್ತು ಕಾಂತಪ್ಪ ಅಂತ ಇಬ್ಬರು ಸೇರಿಕೊಂಡು ಬರೆದಿರೋದು. ಚಿತ್ರಕಥೆ, ಕ್ಲೈಮ್ಯಾಕ್ಸ್, ಅದರ ಹಿಂದೆ ಮುಂದೆ ಎಲ್ಲ ನಾನು ಸೇರಿಸಿಕೊಂಡಿರೋದು. ಬೀಜಾನೇ ಬೇರೆ ಆಗಿರೋದರಿಂದ ಈ ಸಲ ಮರವೂ ಬೇರೆ ಆಗಿದೆ. ಮಜಾದ ಪ್ರಮಾಣ ತುಂಬ ಬೇರೆಯೇ ಇದೆ. ನಾನಲ್ಲ, ಬೇರೆ ಯಾರು ಮಾಡಿದರೂ ಓಡುತ್ತೆ ಅನ್ನೋ ತರಹದ ಕಥೆಗಳಿವು. ಪ್ರಪಂಚದ ಎಲ್ಲ ಭಾಷೆಗಳಲ್ಲೂ ಪಂಚತಂತ್ರ ಮತ್ತು ಈಸೋಪನ ಕಥೆಗಳಿವೆ. ಉದಾಹರಣೆಗೆ, ಆಮೆ ಮತ್ತು ಮೊಲದ ಕಥೆ ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರಿಗೂ ಗೊತ್ತು. ಗೆಲ್ಲಬೇಕಾಗಿದ್ದ ಮೊಲ ಮಲ್ಕೊಂಬಿಟ್ಟು ಓವರ್ ಕಾನ್ಫಿಡೆನ್ಸ್‌ನಲ್ಲಿ ಸೋತು ಹೋಗುತ್ತೆ.